## ಇಲ್ಲಿಯವರೆಗೆ



ಹರಿಲಾಲ ಚಾರ್ಲ್ಸ್‌ಟೌನ್‌ನಲ್ಲೇ ಕೆಲಕಾಲ ಕಳೆಯುತ್ತಾನೆ. ಆ ಸಂದರ್ಭದಲ್ಲೇ ಸರ್ಕಾರ ಬಾಪೂ ಅವರನ್ನು ಬಂಧಿಸಿ ಜೋಹಾನ್ಸ್‌ಬರ್ಗ್ ಜೈಲಿನಲ್ಲಿಡಲಾಗುತ್ತದೆ. ಇದರಿಂದ ಅಲ್ಲಿನ ಭಾರತೀಯ ಸಮುದಾಯ ರೊಚ್ಚಿಗೇಳಿ ಸಭೆ ಸೇರುತ್ತದೆ. ಇದನ್ನು ನೋಡಲು ಹರಿಲಾಲ್ ಬರುತ್ತಾನೆ. ಆಗ ಎಲ್ಲರೂ 'ಚಿಕ್ಕ ಗಾಂಧಿಯವರಿಗೆ ಜಯವಾಗಲಿ' ಎಂದು ಜೈಕಾರ ಹಾಕುತ್ತಾರೆ. ಹೋರಾಟದಲ್ಲಿ ಭಾಗವಹಿಸಿದ ಬಳಿಕ ಹರಿಲಾಲನಿಗೂ ಜೈಲಾಗುತ್ತದೆ. ಇದನ್ನು ಹರಿಲಾಲ ನಿರೀಕ್ಷಿಸಿರುವುದಿಲ್ಲ. ಬಿಡುಗಡೆಯಾದ ಬಳಿಕ ಹರಿಲಾಲ ಫೀನಿಕ್ಸ್ ಆಶ್ರಮಕ್ಕೆ ಬರುತ್ತಾನೆ. ಈ ಮಧ್ಯೆ ಬಾಪೂ ಜೈಲಿನಿಂದ ಬಿಡುಗಡೆಯಾದ ಬಳಿಕ ಇಂಗ್ಲೆಂಡ್‌ಗೆ ಹೋಗುತ್ತಾರೆ. ಇದು ಹರಿಲಾಲ್‌ಗೆ ತಿಳಿದಿರುವುದಿಲ್ಲ.

ಹರಿಲಾಲಗೆ ಮತ್ತೆ ಜೈಲಾಗುತ್ತದೆ. ಆಗ ಹರಿಲಾಲ್ ಜೈಲಿನಲ್ಲಿ ಒಂಟಿಯಾಗುತ್ತಾನೆ. ಒಂಟಿತನ ಅವನನ್ನು ಏಕಾಂತವಾಸಕ್ಕೆ ತಳ್ಳಿತು. ಗಲಾಬ ಮತ್ತು ರಾಮಿ ಅವನಿಗೆ ನಿರಂತರವಾಗಿ ನೆನಪಾಗುತ್ತಿದ್ದರು. ಬಾಪೂ ಅವರು ವಿದೇಶಕ್ಕೆ ಅಧ್ಯಯನ ಮಾಡಲು ಛಗನ್‌ಲಾಲ್‌ನನ್ನು ಆಯ್ಕೆ ಮಾಡಿದ ವಿಷಯ ಪದೇಪದೇ ಮುಳ್ಳಾಗಿ ಚುಚ್ಚುತ್ತದೆ.

ಇಂದು ಸಂಜೆ ಅವನು ನಿಧನನಾದ.'

'ಇದು ತುಂಬಾ ದುಃಖದ ವಿಚಾರ. ನೀವು ಅವನ ಸಂಬಂಧಿಕರಿಗೆ ವಿಷಯವನ್ನು ತಿಳಿಸಿದಿರ? ಅವನ ಹೆಸರೇನಾಗಿತ್ತು?'

'ಇದೇ ಕಷ್ಟವಾಗಿದೆ. ಅವನನ್ನು ಇಲ್ಲಿಗೆ ತಂದಾಗಿನಿಂದ ಪ್ರಜ್ಞೆ ತಪ್ಪಿ ಬಿದ್ದಿದ್ದ. ಅವನ ಹೆಸರು ವಿಳಾಸ ನಮಗೆ ಗೊತ್ತಿಲ್ಲ. ಈಗ ಅವನು ಅನಾಥ ಶವವಾಗಿದ್ದಾನೆ. ನಿಮಗೆ ಭಾರತೀಯ ಸಮುದಾಯದವರ ಪರಿಚಯವಿರುತ್ತದೆ, ಅದಕ್ಕೇ ನಿಮಗೆ ಈ ಸುದ್ದಿಯನ್ನು ಹೇಳುತ್ತಿದ್ದೇನೆ. ನಿಮಗೆ ಉಚಿತವೆನಿಸಿದರೆ, ಇಲ್ಲಿಗೆ ಬಂದು ಶವವನ್ನು ನಿಮ್ಮ ವಶಕ್ಕೆ ತೆಗೆದುಕೊಳ್ಳಿ, ಅವನ ಸಂಸ್ಕಾರವನ್ನು ಮಾಡಿ. ಇಲ್ಲದಿದ್ದಲ್ಲಿ ನಾವು ಸರ್ಕಾರಿ ಮಾರ್ಗವನ್ನು ಹುಡುಕಬೇಕಾಗುವುದು.' ಮೆಡಿಕಲ್ ಆಫೀಸರ್ ತನ್ನ ಡ್ಯೂಟಿಯನ್ನು ನಿರ್ವಹಿಸಿದ.

'ಥ್ಯಾಂಕ್ಯೂ ಡಾಕ್ಟರ್' ಹರಿಲಾಲ ಒಂದು ಕ್ಷಣವನ್ನೂ ವ್ಯರ್ಥ ಮಾಡದೆ ಹೇಳಿದ, 'ನಾನೀಗಲೇ ಬರುತ್ತಿದ್ದೇನೆ, ಆ ಶವ ಅನಾಥವಾಗಬಾರದು. ಅದಕ್ಕೆ ಮಾಡಬೇಕಾದ ಯೋಗ್ಯ ಶವಸಂಸ್ಕಾರದ ಜವಾಬ್ದಾರಿಯನ್ನು ನಾನು ವಹಿಸಿಕೊಳ್ಳುತ್ತೇನೆ.'

ಹರಿಲಾಲ ರಿಸೀವರ್ ಇಟ್ಟು ಗಡಿಯಾರವನ್ನು ನೋಡಿದ. ಸುಮಾರು ಎಂಟು ಗಂಟೆಯಾಗಿತ್ತು. ದೇಹ ಮತ್ತು ಮನಸ್ಸು ಎರಡರಿಂದಲೂ ತುಂಬಾ ದಣಿದಿದ್ದಾಗ್ಯೂ ಹರಿಲಾಲ ಸರ್ಕಾರಿ ಆಸ್ಪತ್ರೆಯ ಹಾದಿಯನ್ನು ಹಿಡಿದ.

ಆಸ್ಪತ್ರೆಯಲ್ಲಿಡಲಾಗಿದ್ದ ವ್ಯಕ್ತಿಯ ಶವದ ಗುರುತು ಅವನಿಗಿರಲಿಲ್ಲ. ಹರಿಲಾಲ ಅಕ್ಕಪಕ್ಕದಿಂದ ಕೆಲವು ಭಾರತೀಯರನ್ನು ಸೇರಿಸಿ ಶವವನ್ನು ವಶಕ್ಕೆ ಪಡೆದ. ಎಲ್ಲರೂ ಸೇರಿ ಆ ಭಾರತೀಯನ ಅಂತ್ಯ ಸಂಸ್ಕಾರವನ್ನು ವಿಧಿ ವಿಧಾನಗಳಿಂದ ನೆರವೇರಿಸಿದಾಗ, ನಡುರಾತ್ರಿ ಕಳೆದಿತ್ತು. ಹರಿಲಾಲ ಗಡಿಯಾರವನ್ನು ನೋಡಿದ. ಟಾಲ್‌ಸ್ಟಾಯ್ ಫಾರ್ಮ್‌ಗೆ ಹೋಗುವುದು ಸಹ ಅನಿವಾರ್ಯವಾಗಿತ್ತು. ಅವನಿಗೆ ಒಂದು ಕ್ಷಣದ ಬಿಡುವೂ ಸಹ ಸಿಕ್ಕಿರಲಿಲ್ಲ. ಹರಿಲಾಲ ತನ್ನವರಿಗೆ, ಆ ಮೃತ ವ್ಯಕ್ತಿಯ ವಿಳಾಸವನ್ನು ಪತ್ತೆಮಾಡುವ ಜವಾಬ್ದಾರಿಯನ್ನು ವಹಿಸಿದ. ಅವನು ಪ್ರಾತಃವಿಧಿಗಳನ್ನು ಮುಗಿಸಿ ಟಾಲ್‌ಸ್ಟಾಯ್ ಆಶ್ರಮಕ್ಕೆ ಹೊರಟಾಗ ಜೋಹಾನ್ಸ್‌ಬರ್ಗ್ ಇನ್ನೂ ಗಾಢನಿದ್ರೆಯಲ್ಲಿತ್ತು.

ಸೂರ್ಯನ ಕಿರಣಗಳು ಟಾಲ್‌ಸ್ಟಾಯ್ ಫಾರ್ಮ್‌ನ ದಿಣ್ಣೆಗಳ ಮೇಲೆ ಬಿದ್ದಾಗ, ಹರಿಲಾಲ ಅಲ್ಲಿಗೆ ಹೋಗಿದ್ದ. ದಣಿವು, ಹಸಿವು ಮತ್ತು ಜಾಗರಣೆಯಿಂದಾಗಿ ಅವನ ತನುಮನ ಚೂರು ಚೂರಾಗಿತ್ತು.

ಆಶ್ರಮಕ್ಕೆ ಕಾಲಿಡುತ್ತಲೇ ಹರಿಲಾಲ ಕೇಳಿದ ಸುದ್ದಿಯಿಂದಾಗಿ, ದಣಿದ ದೇಹದಲ್ಲಿ ರಕ್ತದ ವೇಗ ಹೆಚ್ಚಿತು. ಬಾಪೂ ಅವರು ಛಗನ್‌ಲಾಲ್‌ನನ್ನು ಬ್ಯಾರಿಸ್ಟರ್ ಅಧ್ಯಯನವನ್ನು ಪೂರ್ಣಗೊಳಿಸುವುದಕ್ಕಾಗಿ ವಿದೇಶಕ್ಕೆ ಕಳುಹಿಸಿದ್ದರು. ಅದೇ ಛಗನ್‌ಲಾಲ್ ಅಧ್ಯಯನವನ್ನು ಅರ್ಧಕ್ಕೆ ಬಿಟ್ಟು ಮರಳಿ ಬಂದು, ಹಿಂದೂಸ್ತಾನಕ್ಕೆ ಹೊರಟು ಹೋಗಿದ್ದ.

## ಹದಿಮೂರು

ಅಂದು ಇಡೀ ರಾತ್ರಿ ಹರಿಲಾಲ ನಿದ್ರಿಸದಾದ. ಮರದ ದಿಂಬು ಮತ್ತು ತೆಳು ಕಂಬಳಿಯ ಹಾಸಿಗೆಯನ್ನು ಉಪಯೋಗಿಸುತ್ತಿದ್ದ ಹರಿಲಾಲ ಕಠಿಣ ಪರಿಸ್ಥಿತಿಗಳನ್ನು ಜೈಲಿನಲ್ಲಿ ಕಳೆದಿದ್ದ; ಈ ಹಾಸಿಗೆ ಸಹ ಅವನಿಗೆ ಸುಖದಾಯಕ ಹಾಸಿಗೆ ಎಂದು ಅನ್ನಿಸಿತು. ಇದು ಸ್ವಲ್ಪವೂ ವಿಚಿತ್ರ ಸಂಗತಿಯಾಗಿರಲಿಲ್ಲ. ಈಗ ಕಠಿಣ ಶಾರೀರಿಕ ಶ್ರಮವನ್ನು ಮಾಡುವ ಅಭ್ಯಾಸ ಸಹ ರೂಢಿಯಾಗಿತ್ತು. ಅವನು ರಾಜಕೋಟದಲ್ಲಿದ್ದಾಗ ಗೋಕಿ ಸೋದರತ್ತೆಯವರು ಬಿಸಿಬಿಸಿಯಾದ ತೆಳು ರೊಟ್ಟಿಗಳ ಮೇಲೆ ತುಪ್ಪವನ್ನು ಹಾಕಿ, ಅದರ ಮೇಲೆ ಬೆಲ್ಲವನ್ನಿಡುತ್ತಿದ್ದರು. ಈಗ ಕಪ್ಪು ಚಹಾ, ಬ್ರೆಡ್ ಮತ್ತು ಮುಸುಕಿನ ಜೋಳದ ಗಂಜಿ ಸಹ ಅಭ್ಯಾಸವಾಗಿತ್ತು.

ಆದರೆ ಇಂದು ಹರಿಲಾಲ ಎಚ್ಚರಗೊಂಡಿದ್ದರ ಹಿಂದೆ ಬೇರೆಯೇ ಕಾರಣವಿತ್ತು. ಇಡೀ ಟಾಲ್‌ಸ್ಟಾಯ್ ಫಾರ್ಮ್ ಗಾಢ ನಿದ್ರೆಯಲ್ಲಿತ್ತು, ಆದರೆ ಹರಿಲಾಲ ಕಣ್ಣುಗಳನ್ನು ಸಹ ಮುಚ್ಚಿಕೊಂಡಿರಲಿಲ್ಲ.

ಬೇರೆ ಸಮಯವಾಗಿದ್ದರೆ ಹರಿಲಾಲ ಗುಲಾಬ ಬಳಿಗೆ ಹೋಗಿ ಮನಸ್ಸಿನ ಭಾರವನ್ನು ಹಗುರಗೊಳಿಸಿಕೊಳ್ಳುತ್ತಿದ್ದ. ಗುಲಾಬ ತಿಳಿವಳಿಕಸ್ಥೆಯಾಗಿದ್ದು, ಸೂಕ್ಷ್ಮ ಮನಸ್ಸಿನ ತಾಳ್ಮೆಯುಳ್ಳ ಹೆಂಡತಿಯಾಗಿದ್ದಳು. ಹರಿಲಾಲನಿಗೆ ಹೆಂಡತಿಯ ಬುದ್ಧಿವಂತಿಕೆಯ ಬಗ್ಗೆ ನಂಬಿಕೆಯಿತ್ತು. ಗುಲಾಬ ತನಗೆ ಉಚಿತ ಮಾರ್ಗದರ್ಶನವನ್ನು ನೀಡುತ್ತಿದ್ದಳು.

ಆದರೆ ಈಗ ಗುಲಾಬ ಸಹ ಇಲ್ಲಿರಲಿಲ್ಲ. ಅವನು ಎರಡನೆಯ ಬಾರಿಗೆ ಜೈಲಿನಲ್ಲಿದ್ದಾಗ, ಬಾಪೂ ಅವರು ಒಬ್ಬ ಯೋಗ್ಯ ವ್ಯಕ್ತಿಯೊಂದಿಗೆ ಅವಳನ್ನು ಬಾಣಂತನಕ್ಕೆ ಹಿಂದೂಸ್ತಾನಕ್ಕೆ ಕಳುಹಿಸಿದ್ದರು. ಅವಳ ಎರಡನೆಯ ಹೆರಿಗೆಗೆ ಹೆಚ್ಚು ಸಮಯಾವಕಾಶವಿರಲಿಲ್ಲ; ಈ ಹೆರಿಗೆ ರಾಜಕೋಟದಲ್ಲಾಗುವ ಬಗ್ಗೆ ನಿರ್ಧಾರವಾಗಿತ್ತು, ಹೀಗಾಗಿ ಹರಿಲಾಲ ಜೈಲಿನಿಂದ ಬಿಡುಗಡೆಯಾಗಿ ಅವನ ಬರುವಿಕೆಯನ್ನು ನಿರೀಕ್ಷಿಸುವಷ್ಟು ಸಮಯವಿರಲಿಲ್ಲ.

ಗುಲಾಬ ಈಗ ರಾಜಕೋಟದ ತನ್ನ ಮನೆಯಲ್ಲಿ ಬಹುಶಃ ನಿದ್ರಿಸುತ್ತಿರಬಹುದು. ಹರಿಲಾಲನ ತೆರೆದ ಕಣ್ಣುಗಳೆದುರು ರಾಜಕೋಟ ಮೂಡಿ ಬಂತು. ಗುಲಾಬಳ ತವರು ಮನೆಯ ಅಂಗಳದಲ್ಲಿ ದಟ್ಟವಾದ ಬೇವಿನ ಮರವಿತ್ತು...ದೊಡ್ಡಪ್ಪ ಅಲ್ಲೊಂದು ಕುದುರೆಯನ್ನು ಕಟ್ಟಿ ಹಾಕುತ್ತಿದ್ದರು. ಹಾಲು ಕೊಡುವ ಎರಡು ಹಸುಗಳನ್ನು ಸಹ ಅಲ್ಲಿ ಕಟ್ಟಿಹಾಕಲಾಗಿರುತ್ತಿತ್ತು....ಅಂಗಳದಲ್ಲಿ ತುಳಸಿಯ ಕಟ್ಟೆಯಿತ್ತು...ಅಲ್ಲಿ ನಿತ್ಯ ಸಂಜೆಯ ವೇಳೆಗೆ ದೀಪವನ್ನು ಹೊತ್ತಿಸಲಾಗುತ್ತಿತ್ತು... ಅವನು ಆ ತೆರೆದ ಆಗಸದ ಕೆಳಗೆ ಹುಲ್ಲಿನ ಮಂಚದಲ್ಲಿದ್ದ ಮೆತ್ತನೆಯ ಹಾಸಿಗೆಯಲ್ಲಿ ಮಲಗಿ ಆಗಸದಲ್ಲಿ ಮಿನುಗುವ ನಕ್ಷತ್ರಗಳನ್ನು ನೋಡುತ್ತಿದ್ದ...

ಟಾಲ್‌ಸ್ಟಾಯ್ ಫಾರ್ಮ್‌ನ ಆಗಸದಲ್ಲೂ ಈಗ ನಕ್ಷತ್ರಗಳು ಮಿನುಗುತ್ತಿದ್ದವು. ಹರಿಲಾಲ ಕೆಲವು ನಕ್ಷತ್ರಗಳನ್ನು ಗುರುತಿಸುತ್ತಿದ್ದ. ವೃಶ್ಚಿಕಾ ಮತ್ತು ಮೃಗಶಿರಾ ನಕ್ಷತ್ರಗಳು...ಆಗಸವಂತೂ ಅದೇ... ಆದರೆ ಹರಿಲಾಲನಿಗೆ ತಾನೇಕೆ ಒಂಟಿ ಎಂದು ಅನ್ನಿಸಿತು?

ಒಂದು ವೇಳೆ ಬಾಪೂ ಅವರು ಛಗನ್‌ಲಾಲ್‌ನ ಬದಲು ತನ್ನನ್ನು ವಿದೇಶಕ್ಕೆ ಕಳುಹಿಸಿದ್ದರೆ, ಇಂದು ಬೇರೆಯದೇ ಆದ ಪರಿಸ್ಥಿತಿಯನ್ನು ನೋಡಬಹುದಿತ್ತು. ಛಗನ್‌ಲಾಲ್ ಅಧ್ಯಯನ ವನ್ನು ಪೂರ್ಣಗೊಳಿಸಲಿಲ್ಲ, ಅಲ್ಲದೆ ಆರೋಗ್ಯ ಹದಗೆಟ್ಟಿದ್ದರಿಂದ ಹಿಂದೂಸ್ತಾನಕ್ಕೆ ಮರಳಿ